International Journal of Multidisciplinary Trends

**E-ISSN:** 2709-9369
**P-ISSN:** 2709-9350
www.multisubjectjournal.com
IJMT 2023; 5(10): 07-10
Received: 08-08-2023
Accepted: 12-09-2023

**ವೀರೇಶ ಟಿ.**
ಸಂಶೋಧನ ವಿದ್ಯಾರ್ಥಿ, ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

**ವಾಮದೇವ ಎಚ್.ಟಿ.**
ಮಾರ್ಗದರ್ಶಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

**Corresponding Author:**
**ವೀರೇಶ ಟಿ.**
ಸಂಶೋಧನ ವಿದ್ಯಾರ್ಥಿ, ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

# ಪ್ರಗತಿಶೀಲ ಕಥೆಗಳಲ್ಲಿ ಸಾಂಸ್ಕೃತಿಕ ಸಂಘರ್ಷದಲ್ಲಿ ಸಾಮಾಜಿಕ ಪ್ರಜ್ಞೆ

**ವೀರೇಶ ಟಿ., ವಾಮದೇವ ಎಚ್.ಟಿ.**

**ಪೀಠಿಕೆ**

ಸಾಮಾಜಿಕ ಕ್ರಾಂತಿ ವಿಶ್ಲೇಷಣಾತ್ಮಕ ಸಮಾಜವಾದದ ಪ್ರೇರಣಾತ್ಮಕ ಕೂಸು ಆಗಿರುವಂತೆ ನೈತಿಕ ನೆಲೆಗಟ್ಟಿನ ಸಮತಾವಾದವು 'ಪ್ರಗತಿಶೀಲ' ಸಾಹಿತ್ಯಕ್ಕೆ ಮೂಲಭೂತ ತಳಹದಿಯಾಗಿದೆ. ವಾಸ್ತವಿಕತೆಗೆ ಮಹತ್ವಕೊಟ್ಟು ಸಂಪ್ರದಾಯದ ಮೌಢ್ಯತೆಯನ್ನು ಕಿತ್ತೊಗೆಯಲು ಪ್ರಯತ್ನಿಸಿತು. ಶ್ರಮಜೀವಿಗಳ ಹಿತರಕ್ಷಣೆಯೇ ಪ್ರಗತಿಶೀಲ ಸಾಹಿತ್ಯದ ಉಸಿರಾಗಿ ಪರಿಣಮಿಸಿತು. ಈ ಆಶೆಯದಿಂದ ಕೂಡಿರುವ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಹಿನ್ನೆಲೆ, ಸ್ಥೂಲನೋಟ ಮಾನವೀಯ ಚಿಂತನೆಗಳ ಹೂರಣವನ್ನು ಗ್ರಹಿಸಲಾಗಿದೆ. ಈ ಘಟ್ಟದ ಪ್ರಮುಖ ಲೇಖಕರಾದ ಅ.ನ.ಕೃ. ತ.ರಾ.ಸು ಬಸವರಾಜ ಕಟ್ಟಿಮನಿ, ನಿರಂಜನ, ಇನಾಂದಾರ, ಮಿರ್ಜಿ ಅಣ್ಣಾರಾಯ ಮುಂತಾವದರು ಪ್ರಗತಿಶೀಲ ಸಾಹಿತ್ಯದಲ್ಲಿ ವ್ಯಕ್ತಿತ್ವ ಜೀವನ ಸಾಧನೆಗಳನ್ನು ವಿಭಿನ್ನ ರೀತಿಯಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಕಾಣಬಹುದು.

ಸಮಾಜದಲ್ಲಿನ ಅನ್ಯಾಯ, ಅನಾಚಾರ, ಕ್ರೌರ್ಯ, ದಬ್ಬಾಳಿಕೆ, ದೌರ್ಜನ್ಯದ ವಿರುದ್ಧ ಸಿಡಿದೆದ್ದರು. ಸಮಾಜದಲ್ಲಿ ಶಾಂತಿ ನೆಲೆಸಲು ಕ್ರಾಂತಿ ಆಗಲೇಬೇಕು ಅಂದಿನ ಎಂದರು. ದುರ್ಬಲರ, ದಲಿತರ, ಬಡವರ, ಸ್ತ್ರೀಯರ ಪರವಾಗಿ ಸಾಹಿತ್ಯ ರಚನೆಗೆ ಒತ್ತು ಕೊಟ್ಟರು. ಸಮಾಜದಲ್ಲಿ ಹೊಟ್ಟೆ ಪಾಡಿಗಾಗಿ ವೇಶ್ಯೆಯರು ಅನುಭವಿಸುತ್ತಿದ್ದ ನೋವುಗಳನ್ನು ಸಾಹಿತ್ಯ ಕೃತಿಗಳ ಮೂಲಕ ತಿಳಿಸಿ ಕೊಟ್ಟರು. ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸುವ ಅನಿವಾರ್ಯತೆ ಕುರಿತು ಎಚ್ಚರಿಸಿದರು.

ಸಮಾಜದ ದೊಡ್ಡ ಪಿಡಗುಗಳಲ್ಲಿ ಒಂದಾದ ವೇಶ್ಯಾ ಸಮಸ್ಯೆಯ ಕುರಿತು ಹಲವಾರು ಕಾದಂಬರಿಗಳು ಹಾಗೂ ಕಥೆಗಳು ಅ.ನ.ಕೃ.ರವರ 'ಶನಿಸಂತಾನ' 'ಸಂಜೆಗತ್ತಲು' 'ನಗ್ನಸತ್ಯ' ವೇಶ್ಯಾ ಸಮಸ್ಯೆಯ ಕರಾಳತೆಯನ್ನು ಚಿತ್ರಿಸುತ್ತವೆ. 'ತಾನೊಂದು ಬಗೆದರೆ ದೈವವೊಂದು ಬಗೆಯಿತು.' ಎಂಬಂತೆ ಇಲ್ಲಿ ಮಾನವ ಎನ್ನುವ ವ್ಯಕ್ತಿ ಮತ್ತು ಸರೋಜನಿ ಎಂಬ ಹೆಣ್ಣು ಮಗಳ

ಹೆಸರುಗಳ ಪಾತ್ರ ನಿರ್ವಹಣೆಯಾಗಿದೆ. ತಂದೆ ವಂಶ ಪರಂಪರೆಯ ಐಶ್ವರ್ಯವನ್ನೂ ತಿರಸ್ಕರಿಸಿ ತನ್ನ ಸ್ವಂತ ಬದುಕನ್ನು ತನ್ನ ದುಡಿಮೆಯ ಮೇಲೆ ಕಟ್ಟಬೇಕೆಂದು ಹಂಬಲಿಸುವ ಮಾಧವ ತಾಯಿಯ ವೇಶ್ಯಾವೃತ್ತಿಯ ಬದುಕಿಗೆ ತಿಲಾಂಜಲಿ ನೀಡಿ ಸ್ವಾಭಿಮಾನವ ಬದುಕನ್ನು ಬಾಳಬೇಕೆನ್ನುವ ಸರೋಜನಿ, ಆದರೆ ಕಾಲೇಜಿನಲ್ಲಿ ಪರಸ್ಪರ ಭೇಟಿಯಾದ ಮಾದವ ಮತ್ತು ಸರೋಜನಿಯರ ಭೇಟಿ ಪ್ರೀತಿಗೆ ತೀರುಗುತ್ತದೆ.

ಸಾಹಿತ್ಯಕಾರನು ಸಮಾಜದ ಜೀವನ ಪ್ರವಾಹವನ್ನು ನೋಡುವಾಗ. ಅವುಗಳ ಅನುಕ್ರಮವನ್ನು ತೋರಿಸಿ ವಿವಿಧ ಘಟ್ಟಗಳ ಅಥವಾ ಅವಧಿಗಳ ಪರಸ್ಪರ ಸಂಬಂಧವನ್ನು ಗುರುತಿಸುವಾಗ ಒಂದು ನಿರ್ಧಿಷ್ಟ ತಾರತಮ್ಯಪೂರ್ಣ ಮೌಲ್ಯ ಪ್ರಜ್ಞೆಯನ್ನು ಪಡೆದಿರಬೇಕಾಗುತ್ತದೆ. ಈ ಪ್ರಜ್ಞೆಯ ಒಂದು ಮೌಲಿಕ ಸಂಘಟನೆಯನ್ನು ಆಧರಿಸುತ್ತದೆ. ಈ ಸಂಘಟನೆಯ ಹಿನ್ನೆಲೆಯಲ್ಲಿ ಒಂದು ನಿಚ್ಚಳವಾದ ದರ್ಶನಶಾಸ್ತ್ರವೇ ಇರುತ್ತದೆ. ಆದರೆ ಈ ಹಿನ್ನೆಲೆಯ ವಿವರಗಳು ಈ ಪ್ರಜ್ಞೆಯ ಮಟ್ಟದಲ್ಲಿ ನಿಂತು ಅವನು ಗೈಯುವ ನಿಷ್ಕರ್ಷೆಗಳಿಗೆ ಸತ್ವದ ಅಂತಸ್ತು ಬರುತ್ತದೆ. ಸಾಹಿತ್ಯಿಯು ಜೀವನವನ್ನು ನೋಡಬೇಕಾದ ಪ್ರಜ್ಞೆಯು ಇದೇ ಅಥವಾ ಇಂಥದೇ ಗುರಿ, ವಿಧಿ, ವಿಧಾಗಳಲ್ಲಿ ಸಮಾಜವು ಸಾಹಿತ್ಯಕ್ಕಿಂತ ಭಿನ್ನ ನಿಜ. ಆದರೆ ಉಚ್ಚವಾದ ಒಂದು ಸಾಹಿತ್ಯಕೃತಿಯು ಸಮಾಜದಲ್ಲಿ ತಿಳಿಸಿಕೊಡುತ್ತದೆ. ಸಾಮಾನ್ಯ ಕೃತಿಗಳಿಗೆ ತಮ್ಮ ಸಹಜ ಮಿತಿಯಲ್ಲಿ ಅನ್ವಯವಾಗುವ ಸಾಹಿತಿಕ ನಿಯಮಗಳು ಇಂತಹ ಕೃತಿಗಳಿಗೆ ಅನ್ವಯವಾಗುವ ತಮ್ಮ ಸಹಜ ಮಿತಿಯನ್ನು ದಾಟಿ ವಿಶಾಲವಾದ ಅರ್ಥವ್ಯಾಪ್ತಿಯನ್ನು ಹೊಂದಿರುತ್ತದೆ.

'ಹೊಸಲು ದಾಟಿದ ಹೆಣ್ಣು' ಅ.ನ.ಕೃ. ರವರ ಸಾಮಾಜಿಕ ಸಮಸ್ಯೆಗಳಲ್ಲಿ ಒಂದಾದ ಪರಸ್ಪರ ಹೊಂದಿಕೆಯಾಗದ ದಾಂಪತ್ಯ ಸಮಸ್ಯೆಯ ಸಿಕ್ಕ ಬಿಡಿಸುವ ಪ್ರಯತ್ನವಾಗಿದೆ. ಈ ಕಥೆಯು ಲಾಯರ್ ವೆಂಕಪ್ಪಯ್ಯನ ತಂಗಿ ಕಾವೇರಿಯ ಹಾಗೂ ಪತ್ನಿ ನರಸಮ್ಮ ಸಂಪ್ರದಾಯದ ಮನೋಭಾವದವರು. ಸುಭದ್ರಾಳಿಗೆ ಇಪ್ಪತ್ತು ತುಂಬುತ್ತಿದ್ದಂತೆಯೇ ಮದುವೆಯ ಬಲವಂತದ ಮಾಘಸ್ನಾನ ಮಾಡಿಸುವರು.

ಸುಭದ್ರಳನ್ನು ಮದುವೆಯಾದ ರಂಗಣ್ಣ ದೂರದ ಸಂಬಂಧಿ ಅರವತ್ತು ರೂಪಾಯಿ ಸಂಬಳದ ಹೊಟ್ಟೆ ಬಟ್ಟೆಗೂ ಸಾಲದ ಪ್ರೌಢಶಾಲೆಯ ಉಪಾಧ್ಯಾಯ ಅವನು ಬಡವ, ಮರ್ಯಾದೆಗೆ ಅಂಜುವವನು ಭಾವನಾಜೀವಿ ವಿದ್ಯಾವಂತೆಯೂ ಆಧುನಿಕ ಶಿಕ್ಷಣದಿಂದ ಪ್ರಭಾವಿತಳೂ ಸ್ವಾತಂತ್ರ್ಯ ಮನೋಭಾವದವಳೂ ಆದ ಸುಭದ್ರೆ ರಂಗಣ್ಣನನ್ನೂ ಹಿರಿಯರ ಬಲವಂತಕ್ಕೆ ಮದುವೆಯಾಗಿದ್ದಳು. ಅವನನ್ನು ತನ್ನ ಗಂಡನೆಂದು ಒಪ್ಪಿಕೊಳ್ಳಲು ಅವಳು ಸಿದ್ಧಳಿರಲಿಲ್ಲ. ಮನಸ್ಸಿಗೆ ವಿರೋಧವಾದ ಮದುವೆಯಲ್ಲಿ ಮಮತೆ ಎಲ್ಲಿಂದ ಬರಬೇಕು.

ಎಂದು ಪ್ರಶ್ನಿಸುವ ಸುಭದ್ರ ಆಧುನಿಕ ಕಾಲದ ಸ್ತ್ರೀ ಸ್ವಾತಂತ್ರ್ಯವನ್ನು ಬಯಸುವ ಸ್ವತಂತ್ರ ಮನೊಭಾವದ ಸ್ವಚ್ಛಂದ ಹೆಣ್ಣು ಹೀಗೆ ಅ.ನ.ಕೃ. ರವರ ಕಥೆಯಲ್ಲಿ ಸಾಮಾಜಿಕ ಇರುವದನ್ನು ಈ ಲೇಖನ ಹೇಳಲಾಗಿದೆ. ಅ.ನ.ಕೃ. ರವರ ಮತ್ತೊಂದು ಕಥೆಯಾದ ತಾಯಿಯ ಕರಳು– ಈ ಕಥೆಯಲ್ಲಿ ಸಾಮಾಜಿಕ ಸಮಸ್ಯೆಗಲ್ಲೊಂದಾದ ಇಸ್ಪೀಟಿನ ಚಟದ ದುಷ್ಪರಿಣಾಮವನ್ನು ತಿಳಿಸುವ ಮನೋಜ್ಞ ಕಥೆ ಜೊತೆಗೆ ಪರಿಸ್ಥಿತಿಯ ಶಿಶುವಾದ ಅಸಹಾಯಕ ಮಹಿಳೆಯೊಬ್ಬಳು ಎದುರಿಸಬೇಕಾಗಿ ಬಂದ ಕಷ್ಟ ಪರಂಪರೆಗಳು ಹಾಗೂ ಅವುಗಳಿಗೆ ಮುಖಾಮುಖಿಯಾಗಿ ಬಂದ ಧೈರ್ಯವನ್ನು ಪ್ರದರ್ಶಿಸಿದ ಹೆಣ್ಣಿನ ಆದರ್ಶ ಚಿತ್ರವೊಂದನ್ನು ಅ.ನ.ಕೃ. ಕೊಟ್ಟಿರುವರು.

ಇಸ್ಪೀಟಿನ ಬಲವಾದ ಆಕರ್ಷಣೆ ಹತ್ತಿಕ್ಕಲಾಗದ ದೌರ್ಬಲ್ಯವಾದರಿಂದ ಮನಸ್ಸಿನ ಸ್ಥಿಮಿತ ಕಳೆದುಕೊಂಡು ಮಾಡಬಾರದ್ದನ್ನು ಮಾಡಿಸುತ್ತದೆ. ‘ಗೋಪಾಲಕೃಷ್ಣ ಬಾಂಕಿನ ಕ್ಯಾಷಿಯರ್ ಆಗಿದ್ದ ವೆಂಕಟರಾಯ ಜೂಜಿನ ಸೆಳೆತಕ್ಕೆ ಒಳಗಾಗಿ ತಂದೆ ಮಾಡಿಟ್ಟ ಆಸ್ತಿಯನ್ನು ಕಳೆದ; ಹೆಂಡತಿಯ ಮೈಮೇಲಿನ ಚಿನ್ನಕ್ಕೆ ಕೈಹಾಕಿ ಬ್ಯಾಂಕಿನ ಹಣ ಛಪಾಯಸಿದ ಅವನ ಮೊದಲ ಹೆಂಡತಿ ಸುಶೀಲ ಬಾವಿಗೆ ಬಿದ್ದು ಪ್ರಾಣ ನೀಗಿಕೊಂಡಿದ್ದು ಗಂಡ ಜೂಜಿಗಾಗಿ ತನ್ನ ಮೈಮೇಲಿನ ಒಡವೆ ತೆಗೆದುಕೊಂಡು ಹೋದ ಎನ್ನುವ ಕಾರಣಕ್ಕಾಗಿ ಬ್ಯಾಂಕಿನ ಹಣ ದುರ್ವಿನಿಯೋಗಮಾಡಿದ ಕಾರಣಕ್ಕಾಗಿ ವೆಂಕಟರಾಯ ಜೈಲು ಶಿಕ್ಷೆ ಅನುಭವಿಸಿದ.

ಹೀಗೆ ಅ.ನ.ಕೃ. ತಾಯಿಯ ಕರುಳು ಕಥೆಯಲ್ಲಿ ಒಂದು ಮಹತ್ವದ ಕೃತಿ ತ್ಯಾಗಮಯಿ ಹೆಣ್ಣೊಬ್ಬಳ ಬದುಕಿಗೆ ತನ್ನನ್ನು ಒಪ್ಪಿಕೊಂಡ ರೀತಿಯೇ ವಿಶಿಷ್ಟವಾದುದು.

ಬಸವರಾಜ ಕಟ್ಟಿಮನಿಯವರು ಬಡತನದಲ್ಲಿ ಹುಟ್ಟಿ ಬೆಳೆದಿದ್ದರೂ ತುಂಬಾ ಸ್ವಾಭಿಮಾನಿಗಳು ಹಳ್ಳಿಯಲ್ಲಿ ಜನಿಸಿದ್ದರಿಂದಲೇ ಏನೋ ಅವರದು ಯಾವಾಗಲೂ ನೇರ ಮಾತು ಅಂತಹ ಹೇಳಬಹುದು. ಪ್ರಗತಿಶೀಲ ಸಾಹಿತಿ ಎನಸಿಕೊಂಡ ಅವರು ಜಾತಿಯತೆ ಮಠ–ಮಂದಿರಗಳಲ್ಲಿ ನಡೆಯುವ ಮೋಸ ಮುಸುಕಿನೊಳಗಿನ ಡಾಂಭಿಕತೆ ಸ್ವಾಮಿಗಳ ಕಪಟ ನಾಟಕೀಯತೆ ದಬ್ಬಾಳಿಕೆ ಶೋಷಣೆ ಸಮಾಜದಲ್ಲಿ ಪ್ರಜ್ಞಾರೂಪಕವಾಗಿ ಇತ್ಯಾದಿಗಳನ್ನು ತಮ್ಮ ಕೃತಿಗಳಿಗೆ ಬಹುಮುಖ್ಯ ವಸ್ತುವನ್ನಾಗಿ ಬಳಸಿಕೊಂಡು ಹಲವಾರು ಕಥೆ–ಕಾದಂಬರಿಗಳನ್ನು ರಚಿಸಿ ಜನರಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿದರು. ಅವರ ಹಲವಾರು ಕಥೆಗಳಲ್ಲಿ ಸಾಮಾಜಿಕ ಸಮಸ್ಯೆಗಳಾದ ಬಡತನ, ಹಸಿವು ಮೊದಲಾದವುಗಳಿಂದ ಬೆಂದು ಬಡ ಕೂಲಿಕಾರ್ಮಿಕರ ಬದುಕಿನ ಚಿತ್ರಣವನ್ನು ಮನಮುಟ್ಟುವಂತೆ ಚಿತ್ರಿಸುವಲ್ಲಿ ಕಟ್ಟಿಮನಿಯವರು ತೋರಿದ ಸಾಹಸ ಮೆಚ್ಚುವಂತಹದ್ದು. ಬರಗಾಲದ ದವಡೆಗೆ ಸಿಕ್ಕು ವಿಲಿವಿಲಿ ಒದ್ದಾಡುವ ತಿಪ್ಪಯ್ಯ ಮಹಮ್ಮದಲಿ

ಬರದ ದೇವಿಯಂತೆಯೇ ಕಂಡು ಬರುವ ನಿಂಗಮ್ಮ ಬಂದ ದವಡೆಗೆ ಸಿಕ್ಕ ಗುಳೇಕಾರ ಕುಟುಂಬ ದೀಪಾವಳಿಯ ದಿನವೂ ಕತ್ತಲೆಯಲ್ಲಿಯೇ ಹಸಿದ ಹೊಟ್ಟೆಯಿಂದ ಇರುಳನ್ನು ಕಳೆದ ಶಾರದೆ ಚಂದ್ರಣ್ಣ ಇಂತಹ ಇನ್ನೂ ಹಲವಾರು ಮುಗ್ಧ ಬಡ ಜೀವಿಗಳ ಬದುಕಿನ ಚಿತ್ರಣವನ್ನು ನೀಡುವಲ್ಲಿ ಕಟ್ಟಿಮನಿಯವರು ಸಮಸ್ಯೆ ಸಿಲುಕಿದ ಜನರ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಸಾಹಿತ್ಯದ ಸಾಮರಸ್ಯದಿಂದ ಕೂಡಿದ ಅವರ ಕಥೆಗಳು ಉತ್ತಮ ಸಾಹಿತ್ಯಿಕ ಕೃತಿಗಳಾಗಿ ಮಹತ್ವ ಪಡೆದಿವೆ. ಮಿಗಿಲಾಗಿ ಸಮಕಾಲೀನ ಸಾಮಾಜಿಕ ಪ್ರಜ್ಞೆ ಪ್ರೇರಕವಾದುದು. ಅವರ ಕಥೆಗಳು ಅಪೂರ್ವ ಅಂತಾ ಹೇಳಬಹುದು.

ಪ್ರಸ್ತುತ ಸಮಾಜದಲ್ಲಿ ಕಪಟ ನಾಟಕವಾಡುವ ಸ್ವಾಮಿಗಳು ವ್ಯರ್ಥ ಭಾಷಣ ಬಿಗಿಯುವ ರಾಜಕಾರಣಿಗಳು ಕುತಂತ್ರಗಳಾದ ಪುಡಾರಿಗಳು ಮಾಡುವ ಮೋಸ, ಶೋಷಣೆ ಅನ್ಯಾಯ ಇತ್ಯಾದಿಗಳನ್ನು ನಿರ್ಭಯವಾಗಿ ವಿಡಂಬನಾತ್ಮಕವಾಗಿ ತಮ್ಮ ಕಥೆಗಳಾದ ‘ಬಣ್ಣದ ಬುಗ್ಗೆ’ ‘ಜೀವನ ಕಲೆ’ ಕಥೆಗಳಲ್ಲಿ ಸ್ವಾಮಿಯ ಹಾಗೂ ಶ್ರೀಮಂತರ ನಡತೆ, ರೀತಿ ನೀತಿಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಪ್ರಗತಿಶೀಲರ ಮುಖ್ಯ ಧೋರಣೆಯಾಗಿದ್ದ ಪ್ರತಿಭಟನೆ ಈ ಕಥೆಯಲ್ಲಿ ಸಾಮಾಜಿಕ ವಿಷಮತೆಯನ್ನು ಕಂಡು ಸಹಿಸದ ಕಟ್ಟಿಮನಿಯವರ ಪ್ರತಿಭಟನೆಗೆ ಇದು ನಿದರ್ಶನವಾಗಿ ನಿಲ್ಲುತ್ತದೆ. ಮರುಳಯ್ಯ ಅನುಭವಿಸಿದ ಮಾನಸಿಕ, ದೈಹಿಕ ಹಿಂಸೆ ಮತ್ತು ಸ್ವಾಮಿಯ ಸರ್ವಾಧಿಕಾರದ ದುರ್ವರ್ತನೆ ವಿಕೃತ ಸಮಾಜದ ಕೈಗನ್ನಡಿಯಾಗಿವೆ. ಕಪಟ ಸ್ವಾಮಿಗಳ ಶೋಷಣೆಯನ್ನು ಪ್ರತಿಭಟಿಸುವ ರಾಜಣ್ಣನಿಗೆ ಹಿಂದೆ ಸ್ವಾತಂತ್ರ್ಯಚಳುವಳಿಯ ಹಿನ್ನೆಲೆ ವಿರುದ್ಧ ಹೋರಾಡಿದ ರಾಜಣ್ಣನಂಥವರಿಗೆ ಸ್ವಾಮಿಯ ದುರ್ವರ್ತನೆ ಸಹಜವಾಗಿಯೇ ವಿರೋಧಿಸುವಂತಾಗುತ್ತಿವೆ. ಇಂಥ ಡಾಂಭಿಕ ಧರ್ಮಾಧಿಕಾರಿಗಳ ಶೋಷಣೆ ಅನ್ಯಾಯಗಳು ಹಲವಾರು ಕಥೆಗಳಲ್ಲಿ ನಿರ್ದಾಕ್ಷೀಣ್ಯವಾಗಿ, ನಿರ್ಭಿತಿಯಿಂದ ವ್ಯಕ್ತಗೊಂಡಿವೆ. ಬಸವರಾಜ ಕಟ್ಟಿಮನಿಯವರ ಇನ್ನೊಂದು ಕಥೆಯಲ್ಲಿ ಸಾಮಾಜಿಕ ‘ಬಣ್ಣದ ಬುಗ್ಗೆ’ ಯಲ್ಲಿ ಕಾಣಬಹುದು. ಸಮಾಜದಲ್ಲಿಯ ಮುಗ್ಧ ಜನ ಬ್ರಹ್ಮಚರಿಯ ತಂತ್ರಕ್ಕೆ ಮೋಸ ಹೋಗಿ ತಮ್ಮನ್ನೇ ತಾವು ಅರ್ಪಿಸಿಕೊಳ್ಳುತ್ತಾರೆ. ಆದರೆ ಆತ ಸರ್ವಾಧಿಕಾರಿಯಂತೆ ವರ್ತಿಸಿ ಬಂದ ಐಶ್ವರ್ಯವನ್ನೆಲ್ಲ ದುರದೃಷ್ಟವಶಾತ್ ಕಳೆದುಕೊಂಡು ಬಿದಿಗಳಿಯುತ್ತಾನೆ ಎಂಬುದನ್ನು ಹಂತ ಹಂತವಾಗಿ ಹೆಣೆಯಲಾಗಿದೆ. ಹಿಂದೆ ಮುಂದೆ ವಿಚಾರ ಮಾಡದೆ ಮೋಸ ಹೋಗುವ ಜನರು ಹಾಗೂ ಭ್ರಮೆಯ ಅಟ್ಟಹಾಸ ಮತ್ತು ಭ್ರಮನಿರಸನದಲ್ಲಿ ವ್ಯಕ್ತಗೊಂಡಿದೆ.

“ಸಾಮಾಜಿಕ ಪ್ರತಿಷ್ಠೆಯ ಹಂಬಲಕ್ಕೆ ಮೋಸಬಿದ್ದು, ಜನರು ತಮ್ಮ ಮರುಳುತನಕ್ಕಾಗಿ ತನ್ನ ಮೇಲೆ ಹೊರೆಯಿಸಿದ ಹಿರಿತನ ತನಗೆ ನಿಜವಾಗಿಯೂ ಸಲ್ಲಬೇಕಾದಿದ್ದೆಂಬ ಭ್ರಮೆಗೆ ಒಳಗಾಗಿ, ಜನ ತನ್ನ ಮರುಳತನವನ್ನು ಕಂಡುಕೊಂಡೊ ಇನ್ನಾವ ಕಾರಣಕ್ಕಾಗಿಯೇ ಆತನಿಗೆ ಮೊದಲಿನಂತೆ ಮನ್ನಣೆ ಸಲ್ಲಿಸದಿದ್ದಾಗ ಸಂಕಟಪಡುವ ಒಂದು ಜೀವನದ ಕತೆಯಾಗಿದೆ.”[೧]

ಅಲ್ಪನಿಗೆ ಯಶ್ವರ್ಯ ಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿದ’ ಎಂಬಂತೆ ಭಿಕಾರಿಯೊಬ್ಬನಿಗೆ ಅದೃಷ್ಟವಶಾತ್ ಐಶ್ವರ್ಯ ಬಂದಾಗ ಈ ಜಗತೇ ಅವನ ಕಣ್ಣಿಗೆ ಕಾಣುವದಿಲ್ಲ, ಸಮಾಜ ಅವನಿಗೆ ಕೊಡುವ ಗೌರವವನ್ನು ಕಂಡು ಬೀಗುತ್ತಾನೆ. ಬಂದ ಐಶ್ವರ್ಯ ಮರಳಿ ಹೋದಾಗ ಮತ್ತೇ ಭೀಕಾರಿಯಾಗುತ್ತಾನೆ. ಆಗ ಅದೇ ಸಮಾಜ ಅವನಿಗೆ ಯಾವುದೇ ಗೌರವ ನೀಡುವುದಿಲ್ಲ ಎಂಬುದನ್ನು ನೈಜವಾಗಿ ಚಿತ್ರಿಸಲಾಗಿದೆ. ಧನಮದದಲ್ಲಿ ಮೆರೆಯುವ ದುರಂಹಕಾರಿಗಳಿಗೆ ಇದೊಂದು ಕಿವಿ ಮಾತು ನೀಡಿದಂತಿದೆ. ಬಡತನದಿಂದ ಪ್ರಾರಂಭವಾಗುವ ಕಥೆ

ಬಡತನದಲ್ಲಿಯೇ ಮುಕ್ತಾಯವಾಗುತ್ತದೆ. ಈ ಜಗತ್ತಿನಲ್ಲಿ ತನ್ನ ಪಾಲಿಗೆ ಬಂದ ಕೆಲಸವನ್ನು ನಿಷ್ಠೆ ಪ್ರಾಮಾಣಿಕತೆಯಿಂದ ನಿರ್ವಹಿಸಬೇಕು ಎಂಬುದನ್ನು ಕಡಲೆಕಾಯಿ ಮಾರುವ ಮುದುಕಿಯಿಂದ ತಿಳಿಯಪಡಿಸಲು ಯತ್ನಿಸಲಾಗಿದೆ. ಆ ಮುದುಕಿ ನೈಜ ಜೀವನದ ಸಂಕೇತವಾಗಿ ನಿಲ್ಲುತ್ತಾಳೆ.

ಆನೆಯನೇರಿಕೊಂಡು ಹೋದರೇ ನೀವು!
ಕುದುರೆಯನೇರಿಕೊಂಡು ಹೋದಿರೇ ನೀವು!
ಸತ್ಯದ ನಿಲುವನರಿಯದೇ ಹೋದಿರಲ್ಲಾ!

ಎಂಬ ಮಹಾಮಾನವತಾವದಿ ಜಗಜ್ಯೋತಿ ವಿಶ್ವಬಸವಣ್ಣನವರ ವಚನವನ್ನು ಸಮಯೋಚಿತವಾಗಿ ಬಳಸಿಕೊಳ್ಳಲಾಗಿದೆ. ಕಥೆಯಲ್ಲಿ ಬರುವ ಕಡಿಲೆಕಾಯಿ ಮಾರುವ ಮುದುಕಿ ಕಪಟ, ಸ್ವಾರ್ಥ ಬ್ರಹ್ಮಚಾರಿಗಳನ್ನು ಪ್ರಶ್ನಿಸುವಂತೆ ಕಾಣುತ್ತಾಳೆ. 'ಬಣ್ಣದ ಬುಗ್ಗೆ' ಎಂಬ ಕಥೆಗೆ ಕಟ್ಟಿಮನಿಯವರು ಔಚಿತ್ಯವನ್ನು ಅರಿತು ಕಥೆಗೆ ಹೆಸರಿಡುವುದರಲ್ಲಿ ನಿಪುಣರಾಗಿದ್ದರು ಎಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.
'ಜೀವನ ಕಲೆ' ಈ ಕತೆಯು ಸಾಮಾಜಿಕ ಪ್ರಜ್ಞೆಯನ್ನು ರೂಪಿಸುವ ಕಥೆಯಾಗಿದೆ. ಆಡುವ ಮಾತಿಗೂ ಮಾಡುವ ಕೃತಿಗೂ ಬಹಿರಂಗ ಕೋರಿಕೆಗೂ ಅಂತರಂಗದ ಅನಿಸಿಕೆಗೂ ಇರುವ ಅಜಗಜಾಂತರ ವ್ಯತ್ಯಾಸವನ್ನು ಸಾರಿ ಹೇಳುವ ಕಥೆ 'ಜೀವನಕಲೆ' ನಗರದಲ್ಲಿ

### ೧. ವಿ.ಎಂ. ಇನಾಂದಾರ್– ಸೆರೆಯಿಂದ ಹೊರಗೆ ಮುನ್ನುಡಿ ಪುಟ–೩.

ಪ್ರಾರಂಭವಾಗಲಿದ್ದ ಪ್ರಸಿದ್ಧ ಕಲಾಕಾರನ ಚಿತ್ರ ಪ್ರದರ್ಶನದ ಉದ್ಘಾಟಕವಾಗಿ ರಾಯರು ಆಗಮಿಸುತ್ತಾರೆ. ಶ್ರೀಮಂತರಾದ ರಾಯರು 'ಕಲಾಪ್ರೇಮಿ' 'ಕಲಾರಸಿಕ ಶಿಖಾಮಣಿ' ಎಂದು ಬಿರುದು ಪಡೆದವರು. ಬಿರುದಿಗೆ ತಕ್ಕಂತೆ ದೇಶ–ವೀದೇಶಗಳ ಶ್ರೇಷ್ಠ ಕಲಾವಿದರ ಬೆಳೆಬಾಳುವ ಚಿತ್ರಗಳನ್ನು ತಂದವರು. ಆ ದುಬಾರಿ ಬೆಲೆಯ ಚಿತ್ರಗಳನ್ನು ತಮ್ಮ ಮನೆಯಲ್ಲಿ ಇರಿಸಿಕೊಂಡ ಸಂತೋಷ ಪಡುತ್ತಾರೆ. ನಿಗದಿತ ಸಮಯಕ್ಕೆ ಬಂದ ರಾಯರು ಚಿತ್ರ ಪ್ರದರ್ಶನವನ್ನು ಉದ್ಘಾಟಿಸುವ "ನಮ್ಮ ಮುದ್ದಿನ ಕಲಾದೇವಿ ಮೃತಾವಸ್ಥೆಯಲ್ಲಿದ್ದಾಳೆ. ಆಕೆಯ ಪ್ರೀತಿಯ ಕಂದಮ್ಮಗಳಿಗೆ ತುತ್ತು ಕೂಳಿಲ್ಲ ಸಮಾಜ ಅವರಿಗೆ ಯಾವ ಗೌರವವನ್ನು ಕೊಡುತ್ತಿಲ್ಲ...... ವರುಳುತ್ತಿರುವ ಕಲಾದೇವಿ ಮತ್ತೆ ಮೇಲಕ್ಕೇಳಬೇಕು......"[೨] ಎಂಬ ಕರುಣಾಜನಕ ಮಾತುಗಳನ್ನಾಡಿ ಸಭಿಕರ ಮನ ಗೆಲ್ಲುವಲ್ಲಿ ಯಶಸ್ವಿಯಾಗುತ್ತಾರೆ. ನಂತರ ಪ್ರದರ್ಶನಕ್ಕಿಟ್ಟಿದ್ದ ಹಲವಾರು ಚಿತ್ರಗಳ ವೀಕ್ಷಣೆ ಮಾಡುತ್ತಾರೆ. ಹೆಸರುವಾಸಿಯಗಿದ್ದ ಅನುಭವ ಪ್ರಸಿದ್ಧ ಚಿತ್ರ ಕಲಾಕಾರನ ಪ್ರವರ್ಶನಕ್ಕಿಟ್ಟಿದ್ದ ಅನೇಕ ಚಿತ್ರಗಳಲ್ಲಿ 'ಭಿಕ್ಷೆ ಬೇಡುತ್ತಿದ್ದ ಭಿಕಾರಿ'ಯೊಬ್ಬನ ಸುಂದರ ಕಲಾಕೃತಿಯೊಂದನ್ನು ಮೆಚ್ಚಿಕೊಳ್ಳುತ್ತಾರೆ. ಚಿತ್ರಕಾರ ಹೇಳಿದ ಆ ದುಬಾರಿ ಐದುನೂರು ರೂಪಾಯಿ ಕೊಟ್ಟು ಅದನ್ನು ಖರೀದಿಸುತ್ತಾರೆ. ತುಂಬಾ ಜಾಗರೂಕತೆಯಿಂದ ಅದನ್ನು ತಮ್ಮ ಕಾರಿನಲ್ಲಿಟ್ಟುಕೊಂಡು ಮನೆಗೆ ಬರುತ್ತಾರೆ. ಮನ ತಲುಪಿ ಕಾರು ನಿಲ್ಲಸಿ ಕೆಳಗಿಳಿಯುತ್ತಿದ್ದಂತೆ ನಿಜವಾದ ನಿರ್ಗತಿಕ ಭಿಕಾರಿಯೊಬ್ಬ 'ಅಪ್ಪ ಒಂದು ಕಾಸು ನಿಮ್ಮ ಧರ್ಮ' ಎಂದು ತನ್ನ ಭಿಕ್ಷಾ ಪಾತ್ರೆಯನ್ನು ಮುಂದೆ ಚಾಚುತ್ತಾನೆ ಅವನನ್ನು ನೋಡುವುದೇ ತಡ ಕೋಪ ತಿರಸ್ಕಾರದಿಂದ ಗದರಿಸಿ ಕಳಸಿಬಿಡುತ್ತಾರೆ. ತಾವು ತಂದ ಚಿತ್ರಪಟಕ್ಕೆ ಐದುನೂರೆಂದರೂ ಕಡಿಮೆಯೇ ಎಂದು ಉದ್ಗಾರ ತೆಗೆಯುವ ದಂಪತಿಗಳು ಆ ಭಿಕ್ಷುಕನಿಗೆ ಒಂದು ಬಿಡಿಕಾಸು ಹಾಕುವುದಿಲ್ಲ ನಿರ್ಜೀವ ಚಿತ್ರಪಟವನ್ನು ದುಬಾರಿ ಬೆಲೆ ಕೊಟ್ಟು ಕೊಂಡ ರಾಯರು ಎರಡು ದಿನದಿಂದ ಏನು ತಿಂದಿಲ್ಲವೆಂದು ಬೇಡುತ್ತಿದ್ದ ನಿಜಭಿಕ್ಷುಕನಿಗೆ ಊಟ ಮಾಡಿಸಿ ಕಳುಹಿಸಬೇಕಿತ್ತು ಆದರೆ ರಾಯರು ಮೆಚ್ಚಿಕೊಂಡಿದ್ದ ಭಿಕ್ಷುಕನ ಚಿತ್ರವನ್ನೇ ಹೊರತು ಭುಕ್ಷಕನಲ್ಲ. ಹೀಗೆ ಸಮಾಜದಲ್ಲಿ ಪ್ರತಿಷ್ಠಿತರು ಶ್ರೀಮಂತರೆನ್ನಿಸಿಕೊಂಡ ಬಹುಜನರ ನೈಜ ವರ್ತನೆ ಇದಾಗಿದೆ.
ಕನ್ನಡ ಪ್ರಗತಿಶೀಲ ಲೇಖಕರು ಪ್ರಧಾನವಾಗಿ ಸಾಮಾಜಿಕ ಕಾಳಜಿಯಿಂದಲೇ ಬರೆದರೆಂಬುದನ್ನು ಈ ಹಿಂದೆಯೇ ಗಮನಿಸಲಾಗಿದೆ. ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆಗೆ ಪ್ರಮುಖಸ್ಥಾನ ದೊರಕಿದ್ದು ಪ್ರಗತಿಶೀಲರಿಂದ ಪ್ರಗತಿಶೀಲರ ಇಂಥ ಸಾಮಾಜಿಕ ಪ್ರಜ್ಞೆಗೆ ವಸ್ತುವಿನ

### ೨. ಬಸವರಾಜ ಕಟ್ಟಿಮನಿ– ಸೆರೆಯಿಂದ ಹೊರೆಗೆ –ಜೀವನ ಕಲೆ ಪುಟ–೮೪.

ಆಯ್ಕೆಯ ಕಟ್ಟುಪಾಡುಗಳಿರಲಿಲ್ಲ. ಅಥವಾ ಯಾವುದೇ ಬಗೆಯ ಸೈದ್ಧಾಂತಿಕ ನಿರ್ಬಂಧಗಳನ್ನು
ಅವರು ಹಾಕಿಕೊಳ್ಳಲಿಲ್ಲ. ಸಾಮಾಜಿಕ ಪ್ರಜ್ಞೆಗೆಯೆಂದು ಕಂಡದ್ದನ್ನು ಸಮಸ್ಯೆಗಳನ್ನು ಸೃಷ್ಟಿಸಿದವರನ್ನು ಸಾಮಾಜಿಕ ಪ್ರಗತಿಗೆ ಅತಂಕವಾಗುವ ವ್ಯಕ್ತಿ–ಶಕ್ತಿಗಳನ್ನು ಹಾಗೂ ಒಟ್ಟಾರೆ ಸಮಾಜದಲ್ಲಿ ಕಂಡುಬರುವ ವಿಕೃತಿಗಳನ್ನು ಅವರು ಎತ್ತಿತೋರಿಸಿದರು. ಪ್ರಗತಿಶೀಲ ಬರಹಗಾರರ ಹೆಚ್ಚಿನ ಕಥೆ–ಕಾದಂಬರಿಗಳು ಸಾಮಾಜಿಕ ವಸ್ತುವನ್ನೊಳಗೊಂಡಿರುವುದೇ ಇದಕ್ಕೆ ಪುರಾವೆ.
ಕಟ್ಟಿಮನಿಯವರು ಒಟ್ಟು ಕಥೆಗಳಲ್ಲಿ ಮುಕ್ಕಾಲು ಪಾಲಿಗೂ ಹೆಚ್ಚು ಸಾಮಾಜಿಕ ಕಥೆಗಳೇ ಇದ್ದು ಅವು ಸಮಾಜದ ವಿವಿಧ ಅಂಗ ರಂಗ, ಸಮಸ್ಯೆ ಸಂಕೀರ್ಣತೆಗಳ ಮೇಲೆ ವಿಶೇಷವಾದ ಬೆಳಕು ಬೀರುತ್ತವೆ. ಈ ಎಲ್ಲ ಕಥೆಗಳ ಮುಖ್ಯ ಧ್ಯೇಯ ಸಮತೆಯುಳ್ಳ ಸಮಾಜ ರಚನೆ ಜ್ವಾಲಾಮುಖಿಯ ಮೇಲೆ ಬರೆಯುವಾಗ ಕಮ್ಯುನಿಜಂಗೆ ಒಲಿದಿದ್ದ ಕಟ್ಟಿಮನಿಯವರು ಅನಂತರ ಅದರಿಂದ ಬಿಡಿಸಿಕೊಂಡು ಸಮಾಜವಾದಿ ಧೋರಣೆಯತ್ತಾ ವಾಲಿದ್ದು ಅವರ ಸಾಮಾಜಿಕ ಕಥೆಗಳಿಂದ ತಿಳಿದುಬರುತ್ತದೆ. ಅಂತೆಯೇ ಸಾಮಾಜಿಕ ಸಮತೆಯನ್ನು ಧ್ಯೇಯವಾಗಿಟ್ಟುಕೊಂಡ ಅವರ ಅಸಮಾನತೆಗೆ ಮತ್ತು ಸಾಮಾಜಿಕ ವಿಕೃತಿಗೆ ಕಾರಣವಾಗುವ ಸಮಾಸ್ತನ್ನು ವಸ್ತುನಿಷ್ಠವಾಗಿ ಕಟುವಾಗಿ ತಮ್ಮ ಕಥೆಗಳ ಮೂಲಕ ಬರೆದಿಟ್ಟರು. ಸಾಮಾಜಿಕ ಪ್ರಜ್ಞೆಯನ್ನು ಹೀಗೆ ಸಾಮಾನ್ನೀಕರಸಿ ಯಾವಾಗಲೂ ಅವರು ಹೀಗೆ ಸಮಾಜವಾದ ಮತ್ತು ಪ್ರಗತಿಶೀಲ ಸಿಂದ್ಧಾಂತಗಳಿಗೆ ಕಟಬದ್ಧರಾಗಿ ಬರೆದರೆಂದು ಹೇಳಲಾಗದು ಮೋಹದ ಬಲೆ, ಸಾಕ್ಷಾತ್ಕಾರ, ಆಶ್ರಮವಾಸಿ, ಜನಿವಾರ ಮತ್ತು ಶಿವದಾರ, ಬೀದಿಯಲ್ಲಿ ಬಿದ್ದವಳು, ಪಾತರಗಿತ್ತಿ, ಮಣ್ಣು ಮತ್ತು ಹೆಣ್ಣು, ಮುಂತಾದವವುಗಳಿಂದ ಸಾಮಾಜಿಕ ಪ್ರಜ್ಞೆಯನ್ನು ಇವರ ಕಥೆಗಳಿಂದ ತಿಳಿದುಕೊಳ್ಳಬಹುದು.

## ಗ್ರಂಥಋಣ


೧. ಬಸವರಾಜ ಕಟ್ಟಿಮನಿಯವರ ಕಾದಂಬರಿಗಳು, ಡಾ॥ ಬಸವರಾಜ ಸಾದರ.
೨. ವಿ.ಎಂ. ಇನಾಂದಾರ– ಸೆರೆಯಿಂದ ಹೊರಗೆ
೩. ಪ್ರಗತಿಶೀಲ ಸಾಹಿತ್ಯ – ಡಾ. ರಣಧೀರ.
೪. ಕಥೆ ಮತ್ತು ಕಥಾವಸ್ತು – ಎಸ್.ಎಲ್. ಭೈರಪ್ಪ
೫. ಅ.ನ.ಕೃ. ಬದುಕು ಬರಹ – ಡಾ. ಎಸ್. ವಿದ್ಯಾಶಂಕರ

೬. ತ.ರಾ.ಸು. ಅವರ ಸಮಗ್ರ ಸಣ್ಣ ಕಥೆಗಳು– ಅಂಬುಜಾ ತ.ರಾ.ಸು.
೭. ನಿರಂಜನರ ಕೆಲವು ಸಣ್ಣಕತೆಗಳು– ನಿರಂಜನ
೮. ಕನ್ನಡ ಕಥನ ಸಾಹಿತ್ಯ ಸಣ್ಣಕತೆ– ಜಿ.ಎಸ್. ಆಮೂರ
೯. ಬುದ್ಧಿ ಭಾವ ಬದುಕು– ನಿರಂಜನ